## ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ: ಲೋಕ್/ವಾಹನ/04/ಕೆಎ-04-ಜಿ-1321 (ಟಾಟಾ ಸುಮೋ) ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 20-09-2023

## ಪ್ರ ಕ ಟ ಣೆ

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಇಲಾಖಾ ವಾಹನ ಸಂಖ್ಯೆ: ಕೆಎ-04-ಜಿ-1321ರ ಟಾಟಾ ಸುಮೋ ವಾಹನಕ್ಕೆ (1) ಸರ್ವೀಸ್, ಅಗತ್ಯ ಆಯಿಲ್ ಬದಲಾವಣೆ, ಫಿಲ್ಟರ್‌ಗಳ ಬದಲಾವಣೆ ಮತ್ತು ಜನರಲ್ ಚೆಕ್‌ಅಪ್ (2) ಸ್ಟೇರಿಂಗ್ ಓವರಾಲಿಂಗ್ (3) ಕ್ಲಚ್ ಓವರಾಲಿಂಗ್ ಮತ್ತು (4) ಬ್ರೇಕ್ ಓವರಾಲಿಂಗ್ ಕಾರ್ಯಗಳನ್ನು ಮಾಡಿಸಲು ಉದ್ದೇಶಿಸಲಾಗಿದೆ. ಆದ್ದರಿಂದ, ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ:34:ಬಿಸಿಎ:2004 ದಿನಾಂಕ: 10-03-2005ರಲ್ಲಿ ಮೀಸಲಾತಿ ಪ್ರಾತಿನಿಧ್ಯ ಕಲ್ಪಿಸಿರುವ ಹಾಗೂ ಇತರೆ ಸಂಬಂಧಪಟ್ಟ ದುರಸ್ತಿದಾರರಿಂದ ವಾಹನಕ್ಕೆ ಮೇಲ್ಕಂಡ ದುರಸ್ತಿ ಕಾರ್ಯಗಳನ್ನು ಮಾಡಿಸಲು ಎಲ್ಲಾ ತೆರಿಗೆ ವೆಚ್ಚಗಳು ಸೇರಿದಂತೆ ತಗಲುವ ವೆಚ್ಚದ ಬಗ್ಗೆ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ದುರಸ್ತಿದಾರರು ದರಪಟ್ಟಿಗಳನ್ನು ದಿನಾಂಕ: 30-09-2023 ರಂದು ಸಾಯಂಕಾಲ 5-00 ಗಂಟೆಯೊಳಗಾಗಿ ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ ಸಲ್ಲಿಸತಕ್ಕದ್ದು, ಸದರಿ ಲಕೋಟೆಯ ಮೇಲೆ " **ಕೆಎ-04-ಜಿ-1321 ಟಾಟಾ ಸುಮೋ "ವಾಹನದ ದುರಸ್ತಿ ದರಪಟ್ಟಿ"** ಎಂಬುದಾಗಿ ನಮೂದಿಸತಕ್ಕದ್ದು.

20/09/23

ನಿಬಂಧಕರ ಪರವಾಗಿ,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

20/9/23

**ಪ್ರತಿಯನ್ನು:**

1. ಸೂಚನಾ ಫಲಕಕ್ಕೆ.
2. ಕಚೇರಿ ಕಡತಕ್ಕೆ
3. ಸಾಂಖ್ಯಿಕ ಶಾಖೆಗೆ: ಸದರಿ ಪ್ರಕಟಣೆಯನ್ನು ಈ ಕಚೇರಿಯ ಅಂತರ್ಜಾಲದಲ್ಲಿ ಪ್ರಕಟಿಸಲು ಹಾಗೂ ಸದರಿ ಪ್ರಕಟಣೆಯನ್ನು ದಿನಾಂಕ: 30-09-2023ರ ಸಾಯಂಕಾಲ 5-00 ಗಂಟೆಯ ನಂತರ ತೆಗೆಯಲು ತಿಳಿಸಿದೆ.

Scanned with OKEN Scanner